ಮೈಸೂರು ವಿಭಾಗದ ಅರಣ್ಯ ಇಲಾಖೆಯಲ್ಲಿ ಅಂದಾಜು ಪಟ್ಟಿ ಸರಿಯಾಗಿ ಮಾಡದೇ ಇರುವ ಬಗ್ಗೆ

2437 (3076) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ವಿಭಾಗದ ಅರಣ್ಯ ಇಲಾಖೆಯಲ್ಲಿ ಸರಿಯಾದ ಅಂದಾಜು ಪಟ್ಟಿ ತಯಾರು ಮಾಡದೆ ಕಾರಣ ರೂ.1.95 ಕೋಟಿ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸರಿಯಾದ ಅಂದಾಜು ಪಟ್ಟಿ ತಯಾರಿಸದೆ ಮತ್ತು ಅನುಮೋದಿಸಿದ ಅಧಿಕಾರಿಗಳು ಯಾರು; ನಷ್ಟದ ಬಾಬ್ತುವಿನ ವರ್ಷವಾರು ವಿವರ ಕೊಡುವುದು;

ಇ) ಈ ರೀತಿ ಉಂಟಾಗಿರುವ ನಷ್ಟವನ್ನು ವಸೂಲು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು; ಯಾರ, ಯಾರ ವಿರುದ್ಧ ಏನು ಕ್ರಮ ತೆಗೆದುಕೊಳ್ಳಲಾಗಿದೆ;

ಈ) ಎಷ್ಟು ಮೊತ್ತದ ನಷ್ಟವನ್ನು ವಸೂಲು ಮಾಡಲಾಗಿದೆ; ಈ ರೀತಿ ನಷ್ಟ ಉಂಟಾಗದಂತೆ ಸರ್ಕಾರ ಕೈಗೊಂಡ ಮುಂಜಾಗ್ರತಾ ಕ್ರಮಗಳಾವುವು?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ ಸಚಿವರು):

ಅ) ಇದು ಕರ್ನಾಟಕ ಅರಣ್ಯ ಆರ್ಥಿಕ ಸಂಹಿತೆ ನಿಯಮಗಳ ಪ್ರಕಾರ ಮಹಾಲೇಖಪಾಲಕರ ಆಕ್ಷೇಪಣೆಯಲ್ಲಿರುವ ಮೊತ್ತವಾಗಿದೆ. ಈ ಮೊತ್ತ ಒಟ್ಟು 1.31 ಕೋಟಿ ರೂ.ಗಳು ಆಗಿರುತ್ತದೆ.

ಇದು ನಷ್ಟದ ಮೊತ್ತವಾಗಿರದೆ ಆಕ್ಷೇಪಣೆಯಲ್ಲಿರುವ ಮೊತ್ತವಾಗಿದೆ.

ಆ) ಇದು ಆಕ್ಷೇಪಣೆಯಲ್ಲಿರುವ ಆರ್ಥಿಕ ವೆಚ್ಚವಾಗಿದೆ. ಇದು ನಷ್ಟದ ಬಾಬ್ತು ಅಲ್ಲ.

ಆರ್ಥಿಕ ವಿಶ್ಲೇಷಣೆಯ ವರ್ಷವಾರು ವಿವರ ಮತ್ತು ಸಂಬಂಧಿಸಿದ ಅಧಿಕಾರಿಯ ವಿವರ ಈ ಕೆಳಗಿನಂತಿದೆ:–

ವರ್ಷ	ಆಕ್ಷೇಪಣಾ ಮೊತ್ತ	ಅಧಿಕಾರಿ
94–95	ರೂ.4.63 ಲಕ್ಷ	ಉಪ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು.
96–97	ರೂ.1.19 ಲಕ್ಷ	ಉಪ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು.
97–98	ರೂ.34.00 ಲಕ್ಷ	ಉಪ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು.
99–2000	ರೂ.57.25 ಲಕ್ಷ	ಉಪ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು.
2000–2001	ರೂ.34.24 ಲಕ್ಷ	ಉಪ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು.

ಇ) ನಷ್ಟ ಅಲ್ಲ.

ಮಹಾಲೇಖಪಾಲಕರ ಆಕ್ಷೇಪಣೆ ಬಗ್ಗೆ ವಿವರವಾದ ಪರಿಶೀಲನೆ ನಡೆಸಲಾಗುತ್ತದೆ.

ಈ) ಇದು ನಷ್ಟದ ಬಾಬ್ತು ಆಗಿರುವುದಿಲ್ಲ.

ಬನ್ನೇರಘಟ್ಟ ರಾಷ್ಟ್ರೀಯ ಉದ್ಯಾನ ವನದಲ್ಲಿ ಎಲಿಫೆಂಟ್ ಪ್ರೂಫ್ ಟ್ರೆಂಚ್ ಹೂಡೆಯುವುದು.

2438 (3077) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?